ಒಂದು ವಾರದ ನಂತರ ಊರಿಗೆ ಹೋದ ನಾಗೇಶ್ ಭಟ್ ಪುನಃ ಹಿಂತಿರುಗಿ ಬರಲೇ ಇಲ್ಲ. ಹಳ್ಳಿಯ ಬದುಕಿನಲ್ಲಿ ಕೈ ಸುಟ್ಟುಕೊಂಡು ಒಂಟಿ ಬಾಳು ಬಾಳಲು ಸಾಧ್ಯವಿಲ್ಲವೆಂದು ಟ್ರಾನ್ಸ್‌ಫರ್ ಮಾಡಿಸಿಕೊಂಡನೆಂಬ ಸುದ್ದಿ ಅನಂತರ ಪ್ರಕಾಶ್ ಭಾಟಿಯಾರಿಂದ ತಿಳಿದು ಬಂದಿತು.

ನಾಗೇಶ್ ಭಟ್ ಮತ್ತೆ ಬರುವುದಿಲ್ಲವೆಂಬ ವಿಷಯ ತಿಳಿದಾಗ ಶ್ರೀದೇವಿ ನನ್ನೆದುರೇ ಬಿದ್ದು ಬಿದ್ದು ನಕ್ಕಿದ್ದಳು. 'ನೋಡಿದೆಯಾ ಬೇಗಂ, ಹಳ್ಳಿಯ ಹುಡುಗಿ! ಒಂದು ಕೈ ನೋಡೋಣ ಅಂದು ಕೊಂಡಿದ್ದನೇನೋ. ಜೊತೆಗೆ ಪ್ರೀತಿಯ ನಾಟಕದ ಮಾತುಗಳು ಬೇರೆ' ಎಂದಿದ್ದಳು. ಆಗ ನಾನೂ ನಕ್ಕು ಬಿಟ್ಟಿದ್ದೆ. ಆತನ ಬಗ್ಗೆ ಇವಳಿಗೆ ಯಾವ ಭಾವನೆಗಳೂ ಮೂಡಿಲ್ಲವೆಂದೇ ಭಾವಿಸಿದ್ದೆ. ಅವನ ಪ್ರಶ್ನೆಗಾಗಲಿ, ಪ್ರೀತಿ ತುಂಬಿದ ನೋಟಕ್ಕಾಗಲೀ, ಆಡಿದ ಮಾತುಗಳಿಗಾಗಲೀ ಶ್ರೀದೇವಿ ಯಾವ ಪ್ರತಿಕ್ರಿಯೆಯನ್ನು ವ್ಯಕ್ತ ಮಾಡಿರಲಿಲ್ಲ. ಹಾಗಾಗಿ ಅವಳ ನಗು ತೋರಿಕೆಯದೆಂದು ನನಗೆ ತಿಳಿದಿರಲಿಲ್ಲ.

ಆದರೆ ನಾಗೇಶ್ ಭಟ್ ಹೊರಟುಹೋದ ಆರು ತಿಂಗಳ ನಂತರ ಆ ಭಾವನೆ ತಪ್ಪೆಂದು ತಿಳಿಯಿತು. ಈ ಅವಧಿಯಲ್ಲಿ ಶ್ರೀದೇವಿ ಅರ್ಧದಷ್ಟು ಇಳಿದು ಹೋಗಿದ್ದಳು. ಅಂದು ಕೆರೆಯಲ್ಲಿ ಸಿಕ್ಕಾಗ 'ಅಪ್ಪಯ್ಯ ಆ ಗಂಡೂ ಈ ಗಂಡೂ ಅಂತ ಓಡಾಡ್ತ ಇದ್ದಾರೆ. ಯಾಕೋ ಏನೋ ಗಂಡ ಅಂದ್ರೆ ನಾಗೇಶನೇ ಅನ್ನುವ ಭಾವನೆ ನನ್ನ ಮನಸ್ಸಿನಲ್ಲಿ ಆಳವಾಗಿ ಬೇರೂರಿ ಬಿಟ್ಟಿದೆ. ಅವನು ನನ್ನ ಮರೆತಿದ್ದರೂ ಪರವಾಗಿಲ್ಲ, ಅವನೇ ನನ್ನ ಗಂಡ ಅನ್ನೊ ನೆಮ್ಮದೀಲಿ ನಾನು ಇಲ್ಲಿ ಬಾಳ್ತೀನಿ. ಅವನಿಲ್ಲದೇ ಬಾಳ್ತೀನಿ. ಆದರೆ ಬೇರೆಯೋರ ಹೆಂಡತಿಯಾಗಿ ಜೀವನಪೂರ್ತಿ ಒಂದೇ ಸೂರಿನಡಿಯಲ್ಲಿ ಬಾಳ್ತೀನಿ ಅನ್ನೋ ಶಕ್ತಿ ನನಗಿಲ್ಲ ಬೇಗಂ' ಬಿಕ್ಕಿ ಬಿಕ್ಕಿ ಅಳುತ್ತಾ ನುಡಿದಿದ್ದಳು. ನೀರು ತೆಗೆದುಕೊಳ್ಳಲು ಬಂದವಳು ಕೆರೆಗೇ ಕಣ್ಣೀರು ಕೊಡುತ್ತಿದ್ದಳು. ನಾಗೇಶ್ ಭಟ್‌ನ ಪ್ರೀತಿಯ ಮಾತುಗಳಿಗೆ ಪ್ರತಿಕ್ರಿಯಿಸದೆ ಅವನು ಹೊರಟು ಹೋದಾಗ ನಕ್ಕ ಶ್ರೀದೇವಿ ಯಾರು? ಅವನನ್ನೇ ಗಂಡನೆಂದು ನಂಬಿ ಬೇರೆಯವರನ್ನು ಮದುವೆಯಾಗಲಾಗದು ಎಂದು ಅಳುತ್ತಾ ಕೂತ ಶ್ರೀದೇವಿ ಯಾರು? ನನಗೆ ಪೆಚ್ಚಾಗಿ ಹೋಯಿತು. ಬಹುಶಃ ಈ ಸೆಳೆತವೇ ಪ್ರೀತಿ ಇರಬಹುದೇ? 'ನಾಗೇಶನ ಪ್ರೀತಿಗೆ ಹೇಗೆ ಪ್ರತಿಕ್ರಿಯಿಸಬೇಕೂಂತ ನಂಗೆ ತಿಳಿದಿರಲಿಲ್ಲ. ಇದು ನಂದೇ ತಪ್ಪು, ಆದ್ರೆ ಮದುವೆ ಮಾತು ಬಂದಾಗಿನಿಂದ ನಾಗೇಶನ ಮೇಲೆ ನಾನೆಷ್ಟು ಪ್ರೀತಿ ಇಟ್ಟಿದ್ದೀನಿ ಅನ್ನೋದು ನಂಗೆ ಈಗ ತಿಳೀತಾ ಇದೆ. ಅಪ್ಪಯ್ಯಂಗೆ ಅದೆಲ್ಲಾ ಗೊತ್ತಿಲ್ಲ. ಈ ವರ್ಷ ಲಗ್ನ ಮಾಡೇ ತೀರ್‍ತೀನಂತ ನಿರ್ಧರಿಸಿಬಿಟ್ಟಿದ್ದಾರೆ. ಬೇರೆಯವರ ಜೊತೆ ನಾ ಹೇಗೆ ಬಾಳಲಿ.'

'ಪ್ರೀತಿ' ಎಂಬುದರ ಅರಿವೇ ಇಲ್ಲದ ನಾನು ಅವಳನ್ನು ಸಮಾಧಾನಪಡಿಸಲು ಬೇಕಾದ ಪದಗಳಿಗೆ ಹುಡುಕಾಡಿದ್ದೆ. ಮನೆಯಿಂದ ತಲೆಯನ್ನ ಹೊರಗೆ ಹಾಕದ ಹುಡುಗಿ ತನ್ನ ಮನ ಮೆಚ್ಚಿದವನನ್ನು ಕಾಣಲು ಮೊದಲ ಬಾರಿಗೆ ತನ್ನ ತಂದೆ ಬಳಿ ಅಕ್ಕನ ಮನೆಗೆ ಹೋಗುತ್ತೇನೆಂದು ಸುಳ್ಳು ಹೇಳಿ ನಗರದ ಹಾದಿ ಹಿಡಿದಿದ್ದಳು. ನಾಗೇಶ್ ಭಟ್ ಮಾತನಾಡುವಾಗ ಅಲ್ಲಿ ಇಲ್ಲಿ ಹೇಳಿದ್ದ ಮಾತುಗಳಲ್ಲೇ ಅಡ್ರೆಸ್ ಎಂಬುದೊಂದು ಸೃಷ್ಟಿಸಿ, ಅದರ ಆಧಾರದ ಮೇಲೇ ಆತನ ಮನೆಯನ್ನು ಗುರುತಿಸುತ್ತೇನೆಂದು ಧೈರ್ಯದಿಂದ ಹೊರಟ ಹುಡುಗಿ ನಗರದಲ್ಲಿ ಯಾರಾದರೂ ತನ್ನ ಮುಖವನ್ನು ಗುರುತಿಸಿಯಾರು ಎಂಬ ಆತಂಕದಿಂದ ನನ್ನ ಬುರ್ಖಾವನ್ನು ಎರವಲು ಕೇಳಿ ಪಡೆದುಕೊಂಡಿದ್ದಳು.

ಇಲ್ಲಿಯತನಕ ಮಾತ್ರ ನನಗೆ ನಿಜ ತಿಳಿದಿರುವುದು. ಮುಂದಿನದನ್ನು ಅವಳ ಹತ್ತಿರದ ಸ್ನೇಹಿತೆಯಾಗಿ, ಅವಳನ್ನು ಅರಿತವಳಾಗಿ ಊಹಿಸುವುದಾರೆ, ಬಹುಶಃ ಅವಳಿಗೆ ನಾಗೇಶ್ ಭಟ್‌ನ